ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) ಬಂದಿರುತ್ತದೆ.

ಆ) ರಾಮನಗರ ತಾಲ್ಲೂಕು, ಕೂಟಗಲ್ ಹೋಬಳಿ, ಅಕ್ಕೂರು ಜಾಲಮಂಗಲ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಒಟ್ಟಾರೆ ಉದ್ದ 6.00 ಕಿ.ಮೀ. ಗಳಾಗಿರುತ್ತದೆ. ಸದರಿ ರಸ್ತೆಯನ್ನು ಲೆಕ್ಕ ಶೀರ್ಷಿಕೆ 3054–ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ನಿಧಿ ಅಡಿ ₹ 9.30 ಲಕ್ಷಗಳ ಅನುದಾನದಲ್ಲಿ ಅಕ್ಕೂರು ಗ್ರಾಮ ಪರಿಮಿತಿಯಲ್ಲಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ.

ಇ) ಸದರಿ ರಸ್ತೆಯನ್ನು ಲೆಕ್ಕ ಶೀರ್ಷಿಕೆ 3054–ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ನಿಧಿ ಅಡಿ ಅಭಿವೃದ್ಧಿ ಪಡಿಸಲಾಗುತ್ತಿದ್ದು, ಟೆಂಡರ್ ನಿಯಮಾವಳಿಯಂತೆ ಕಾಮಗಾರಿಯನ್ನು ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು.

ದೊಡ್ಡ ಬ್ರಿಡ್ಜ್ ನಿರ್ಮಾಣ

18(139); ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)

ಅ) ರಾಮನಗರ ತಾಲ್ಲೂಕು, ಬಿಡದಿ ಹೋಬಳಿ ಚೌಕಹಳ್ಳಿ–ಗೋಪಹಳ್ಳಿ ಮಧ್ಯೆ ಇರುವ ಬ್ರಿಡ್ಜ್ ಚಿಕ್ಕದಾಗಿದ್ದು, ಮಳೆಗಾಲದಲ್ಲಿ ಬೆಂಗಳೂರಿನ ಕೊಳಚೆ ನೀರು ಹೆಚ್ಚಾಗಿ ಹರಿಯುವುದರಿಂದ ಸಾರ್ವಜನಿಕರ ಸಂಚಾರಕ್ಕೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ದೊಡ್ಡದಾಗಿ ಬ್ರಿಡ್ಜ್‌ನ್ನು ನಿರ್ಮಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು; ಯಾವ ಕಾಲಮಿತಿಯಲ್ಲಿ ನಿರ್ಮಿಸಲಾಗುವುದು?

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) ಬಂದಿದೆ.

ಆ) ಈ ಸೇತುವೆ ನಿರ್ಮಿಸಲು ಕೇಂದ್ರ ರಸ್ತೆ ನಿಧಿ ಯೋಜನೆಯಡಿ ₹ 200.00 ಲಕ್ಷಗಳಿಗೆ ಅಂದಾಜು ಅನುಮೋದನೆಗೊಂಡಿದ್ದು ಸದರಿ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.

ಹೆಗ್ಗಡೆಗೆರೆ ರಸ್ತೆ ಅಭಿವೃದ್ಧಿ

19(140); ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)

ಅ) ರಾಮನಗರ ತಾಲ್ಲೂಕು, ಬಿಡದಿ ಹೋಬಳಿ ಬೆಂಗಳೂರು–ಮೈಸೂರು ರಸ್ತೆಯಿಂದ ಹೆಗ್ಗಡಗೆರೆ ರಸ್ತೆ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು;

ಇ) ಯಾವ ಯೋಜನೆಯಡಿಯಲ್ಲಿ ಹಾಗೂ ಯಾವ ಕಾಲಮಿತಿಯಲ್ಲಿ ಅಭಿವೃದ್ಧಿ ಪಡಿಸಲಾಗುವುದು?

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) ಬಂದಿದೆ.

ಆ) ಸದರಿ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಒಟ್ಟು ಉದ್ದ 11.20 ಕಿ.ಮೀ. ಇರುತ್ತದೆ. ಪ್ರಸ್ತುತ 0.00 ರಿಂದ 2.00 ಕಿ.ಮೀ. ವರೆಗೆ ಹಾಳಾಗಿರುವ ರಸ್ತೆಯ ಆಯ್ದ ಭಾಗಗಳನ್ನು ಅಭಿವೃದ್ಧಿಪಡಿಸಲು ಲೆಕ್ಕ ಶೀರ್ಷಿಕೆ 3054–04–337–1–19–172 ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ (ಯೋಜನೇತರ) ಅಡಿಯಲ್ಲಿ ಅಂದಾಜು ಮೊತ್ತ ₹ 86.00 ಲಕ್ಷಗಳಿಗೆ ತಾಂತ್ರಿಕ ಮಂಜೂರಾತಿ ನೀಡಲಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಉಳಿದ ಸರಪಳಿಗಳಲ್ಲಿ ಗುಂಡಿ